1885ನೇ ಇಸವಿ ಅರ್ಜೀ ನಂಬರ್ 182.

ಮೃತಪಟ್ಟ ಕೇಶವಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಅಗ್ರಹಾರದ ಸುಬ್ಬರಾವ್, ಮೃತಪಟ್ಟ ಸದರೀ ಕೇಶವಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಸುಬ್ಬರಾವ್ ಸದರೀ ವಾಸಸ್ಥನಾಗಿ ಮೃತಪಟ್ಟ ಕೇಶವಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ,

ಸದರೀ ದರಖಾಸ್ತುದಾರನಾದ ಸುಬ್ಬರಾವ್ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೇಶವಯ್ಯನ ಆಸ್ತಿಗೆ ಹಕ್ಕುದಾರರಾದ ವಿಷ್ಣ ರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 191.

ಮೃತಪಟ್ಟ ಸಾಲಪ್ಪಿ ವೆಂಕಟರಮಣಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಲಕ್ಷ್ಮಮ್ಮ, ಮೃತಪಟ್ಟ ಸದರೀ ವೆಂಕಟರಮಣಯ್ಯಗೆ ತಂಗಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಲಕ್ಷ್ಮಮ್ಮ ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಮ್ಮನ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಯ್ಯನ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಏಪ್ರೆಲ್ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಕಾಗಿದೆ.

ವಿ. ಆರ್. ನರಸಿಂಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಪ್ರಸಿದ್ಧ ಪತ್ರಿಕೆ.

ಮೈಸೂರು ಷಹರಿಗೆ ಕೀರಿದ ಕುಕ್ಕರಹಳ್ಳಿ ತಲುವಿಗೆ ನೀರು ಬರತಕ್ಕ ಕಾಲ್ವೆಯನ್ನು ಬಡಾಯಿಸತಕ್ಕ ಕೆಲಸಕ್ಕಾಗಿ ಯಿಷ್ಟವುಳ್ಳವರು ದರಖಾಸ್ತುಗಳನ್ನು ಕೊಡಬಹುದು.

2. ಇದಕ್ಕೆ ಸಂಬಂಧಪಟ್ಟ ಅಂದಾಜಾ ನಕ್ಷೆ, ದರಗಳ ತಪಸೀಲು ಮತ್ತು ಷರತ್ತುಗಳು ಇವುಗಳನ್ನು ತಿಳಿದುಕೊಳ್ಳತಕ್ಕವರು ಪ್ರತಿನಿತ್ಯವೂ ಹಗಲು 11 ಗಂಟೆಲಾಯಿತು 4 ಗಂಟೆವಳಗ್ಗಾಗಿ ಮೈಸೂರು ಡಿವಿಜನ್ ಯಜ್ಜಿಕ್ಯೂಟಿವ್ ಇಂಜನೀರು ಆಫೀಸಿಗೆ ಹಾಜರಾಗಿ ತಿಳಿದು ಕೊಳ್ಳಬಹುದು.

3. ಇದರ ಕೆಳಗೆ ತೋರಿಸಿ ಇರುವ ನಮೂನೆ ಅನುಸರಿಸಿ ಕಳುಹಿಸಬೇಕಾವ ಟೆಂಡರ್‌ಗಳನ್ನು ಮೊಹರ್ ಮಾಡಿ ಕಳುಹಿಸತಕ್ಕದ್ದು. ಹೀಗೆ ಕಳುಹಿಸಬೇಕಾವ ಟೆಂಡರ್‌ಗಳಿಗೆ ಸ॥ 1885ನೇ ಇಸವಿ ಏಪ್ರೆಲ್ ತಾರೀಖು 25ರವರೆಗೆ ಅವಧಿ ಇರುತ್ತೆ.

ಟೆಂಡರ್‌ಗಳ ನಮೂನೆ.

ಸ॥ 1885 ನೇ ಮತ್ತು ಂ ದರಗಳ ತಪಸೀಲ್ ಪಟ್ಟಿಯಲ್ಲಿ ನಮೂದಿಸಿ ಯಿರುವ ಸರ್ಕಾರ್ ದರಗಳಿಗಿಂತಲೂ ಕೇಕಡಾ ಕಮ್ಮಿಯಾಗಿ ಸ್ಪೆಸಿಫಿಕೇರ್ಷ ಮತ್ತು ನಕ್ಷೆ ಅನುಸರಿಸಿ ನ್ನು ನಡಿಸಲು ಯಿಷ್ಟವುಳ್ಳವನಾಗಿದ್ದೇನೆ.

ಕಂಟ್ರಾಕ್ಟುದಾರನ ಸೈ॥.

4. ಟೆಂಡರುಗಳ ವೈಕಿ ಯಾವದನ್ನಾದರೂ ಮಂಜೂರ್ ಮಾಡತಕ್ಕದ್ದು ಸೂಪರಿಂಟೆಂಡಿಂಗ್ ಯಿಂಜನೀರು ಸಾಹೆಬರವರನ್ನು

ವಹಿಸಿ ಯಿರುತ್ತೆ. ಕಮ್ಮಿಯಾದ ಅಥವಾ ಮತ್ಯಾವ ಟೆಂಡರನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ಅವುಗಳನ್ನು ತಿರಸ್ಕರಿಸುವದಕ್ಕೆ ತಕ್ಕ ಕಾರಣಗಳನ್ನು ಕೊಡುವದಕ್ಕೂ ಸೂಪರ್‌ಟೆಂಡಿಂಗ್ ಯಿಂಜನೀರು ಸಾಹೆಬರು ಬದ್ಧರಾಗುವದಿಲ್ಲಾ.

ಎ. ಹೆಚ್. ಕರವಿ,
ಎಗ್ಜಿಕ್ಯೂಟಿವ್ ಇಂಜನೀರ್, ಮೈಸೂರು ಡಿವೀಜ್ಞ.

ತಾರೀಖು 10ನೇ ಏಪ್ರೆಲ್ 1885.

ಇದರಿಂದ ತಿಳಿಯಪಡಿಸುವವೇದಂಮರೆ, ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನು ಕ್ರಮವಾದ ವಾರಸುದಾರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾರೀಕನಾಗಲಿ ಈ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ IIIನೇ ನಂಬರ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ಡಿಪಾಸಿಟ್‌ಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
44 1882—83	ಮೈಸೂರು ಬಸವನಮಹಲ್ಲಾದಲ್ಲಿರುವ ತ್ರೀರಂಗಪಟ್ಟಣದ ಮುನಿಫ್ ಕೋರ್ಟುದಾರಿ ವಾಲೀಕಾರ ತಿಮ್ಮಾರಾಂಬಿಂಗ್ ಪೆದಾರ ಕ್ರಿಷ್ಣಗಿರಿ ಗೋಸಾಯಿ	ಮೈಸೂರು ಬಸವನಮಹಲ್ಲಾದಲ್ಲಿರುವ ಭೂಲು ಕೆಚೇರಿ ವಾಲೀಕಾರ ತಿಮ್ಮಾರಾಂಬಿಂಗ್	19—4—82	19—4—82	23 ರೂಪಾಯಿನ ಖಾಲಿ ಜಮೀನಿನ ಕ್ರಯಪತ್ರ.
489 1882—83	ಮೈಸೂರು ಲಷ್ಕರ್ ಮಹಲ್ಲಾದಲ್ಲಿರುವ ಗುಲಾಂಮಹಮ್ಮದ್ ಸಾಹೆಬರ ಹೆಂಡರೀಕ ವುರಫ ಬನೆಖಾತಿ ತಾಜಬಿ	ಮೈಸೂರು ಲಷ್ಕರ್ ಮಹಲ್ಲಾದಲ್ಲಿರುವ ಮಹಮ್ಮದಿಪ	24—10—82	14—11—82	150 ರೂಪಾಯಿನ ಮನೆ ಕ್ರಯದ ದಸ್ತಾವೇಜು.
528 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಸೈಯದ್ ಮಹಮ್ಮದ್ ಹುಕೇನಿ ವುರಫ ಸಾಹೆಬಜಾ	ಮೈಸೂರು ಮಂಡಿಮಹಲ್ಲಾದಲ್ಲಿರುವ ಸೈಯದ್ ರಹಮತುಲ್ಲಾ ಹುಕೇನಿ	13—11—82	20—11—82	400 ರೂಪಾಯಿನ ಜಮೀನು ಅಧಾರ ದಸ್ತೈವಜು.
613 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಗಂಗಡಿಕಾರ ಬಸವಂಣ 1, ಬೊಳೇಗೌಡ 1, ಬಸವಂಣ 1, ಈ ಮೂರು ಜನ	ಮೈಸೂರು ಬಸವನಮಹಲ್ಲಾದಲ್ಲಿರುವ ಚಂದ್ರಗಿರಿ ಅಬ್ಬಪ್ಪಪಟ್ಟ	29—11—82	4—12—82	160 ರೂಪಾಯಿನ ಜಮೀನ್ ಕ್ರಯಪತ್ರ.
635 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಲಾಡರ ನರಸಂಣ 1 ಚಿಕ್ಕನರಸಂಣ 1 ಸಹಾ	ಮೈಸೂರು ದೇವರಾಜ ಮಹಲ್ಲಾದಲ್ಲಿರುವ ಸಾಹುಕಾರ ಚಿಕ್ಕ ಮುದ್ದಂಣನ ಮಗ ಚಿಕ್ಕ ಪಾಪಂಣ	5—12—82	8—12—82	500 ರೂಪಾಯಿನ ಜಮೀನ್ ಆಧಾರ ಪತ್ರ.

ಅಬ್ದುಲ್‌ಖಾದರ್, ಕೆ. ಬಿ,
ರಿಜಿಸ್ಟ್ರಾರ್.
2 B